ಮುನ್ನಡೆಯಿಂದ....

# ಸೂಜಿ-ದಾರ

ಸಂಪುಟ : 4 | ಸಂಚಿಕೆ : 1 | ಪುಟ : 8 | ಖಾಸಗಿ ಪ್ರಸಾರಕ್ಕಾಗಿ | ಸೆಪ್ಟೆಂಬರ್ 2008

## ಬೆಲೆಯೇರಿಕೆ ಸುಳಿಯಲ್ಲಿ ಗಾರ್ಮೆಂಟ್ಸ್ ಕಾರ್ಮಿಕರು

ಸಂಪಾದಕೀಯ...


*ಸ್ನೇಹಿತರೇ,*

'ಸೂಜಿದಾರ' ಗಾರ್ಮೆಂಟ್ಸ್ ಕಾರ್ಮಿಕರ ಪತ್ರಿಕೆಯಾಗಿ ಹೊರಬಂದು 2008 ರ ಆಗಸ್ಟ್ ತಿಂಗಳಿಗೆ ನಾಲ್ಕು ವರ್ಷಗಳು ಪೂರೈಸುತ್ತಿದೆ. ಈ ನಾಲ್ಕು ವರ್ಷಗಳಲ್ಲಿ ಸೂಜಿದಾರ ಓದಿದ ಹಲವು ಗಾರ್ಮೆಂಟ್ಸ್ ಕಾರ್ಮಿಕರ ಮಾಲೀಕರು, ಸರ್ಕಾರೀ ಅಧಿಕಾರಿಗಳು, ಇತರ ಸಂಘಟನೆಗಳು ಹಲವಾರು ಬಾರಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಕೆಲವೊಂದು ಬಾರಿ ಹಲವಾರು ಕಾರಣಗಳಿಂದ ಪತ್ರಿಕೆ ಬರುವುದು ತಡವಾದರೆ ಯಾಕೆ ಈ ಬಾರಿ ಪತ್ರಿಕೆ ಬಂದಿಲ್ಲ? ಬೇಗ ಹೊರತನ್ನಿ ಎಂದು ಕಾರ್ಮಿಕರು ಆಗ್ರಹಿಸಿದ ಉದಾಹರಣೆಗಳು ಇವೆ. ಕಳೆದ ನಾಲ್ಕು ವರ್ಷಗಳಿಂದ ಈ ಪತ್ರಿಕೆಯು ಗಾರ್ಮೆಂಟ್ಸ್ ಕಾರ್ಮಿಕರ ಹಲವಾರು ಸಮಸ್ಯೆ, ವಿಚಾರ, ವಿಷಯಗಳನ್ನು ಕುರಿತು ಚರ್ಚಿಸಿದೆ, ಸಮಾಜಕ್ಕೆ ತಿಳಿಸಲು ಪ್ರಯತ್ನಿಸಿದೆ. ಹಲವಾರು ಕಾರ್ಮಿಕ ಕಾನೂನುಗಳ, ಹಕ್ಕುಗಳ ಬಗ್ಗೆ ಕಾರ್ಮಿಕರಿಗೆ ಮಾಹಿತಿ, ತಿಳುವಳಿಕೆ ನೀಡಿದೆ. ಕಾರ್ಮಿಕರ ಮಕ್ಕಳ ಹುಟ್ಟುಹಬ್ಬವಾದಾಗ, ಅವರ ಮಕ್ಕಳು ಒಳ್ಳೆಯ ಅಂಕ ತೆಗೆದುಕೊಂಡು ತರಗತಿಗಲ್ಲಿ ಪಾಸಾದಾಗ ಸೂಜಿಧಾರವೂ ಅವರೊಂದಿಗೆ ಸಂತಸವನ್ನು ಹಂಚಿಕೊಂಡಿದೆ. ಪತ್ರಿಕೆ ಇನ್ನೂ ಹೆಚ್ಚು ಹೆಚ್ಚು ಜನರನ್ನು ಮುಟ್ಟಲು ತಮ್ಮೆಲ್ಲರ ಬೆಂಬಲ ಪ್ರೋತ್ಸಾಹ ಅತ್ಯಗತ್ಯ. ತಮ್ಮ ಈ ಉತ್ಸಾಹ ಹೀಗೇ ಇರಲಿ ಎಂದು ಸೂಜಿದಾರ ಬಳಗವು ಆಶಿಸುತ್ತದೆ.

ಇತ್ತೀಚಿನ 6 ತಿಂಗಳಲ್ಲಿ ಪ್ರಪಂಚ ಪೂರಾ ಹಣದುಬ್ಬರಕ್ಕೆ ಸಿಲುಕಿದೆ. ಅದರಲ್ಲಿಯೂ ಬೆಂಗಳೂರಿನಂತಹ ಮಹಾನಗರದ ಜನತೆ ಅಗತ್ಯ ವಸ್ತುಗಳ ಬೆಲೆಯೇರಿಕೆಯಿಂದ ಅಕ್ಷರಶಃ ತತ್ತರಿಸುತ್ತಿದೆ. ಅಂತರ ರಾಷ್ಟ್ರೀಯ ಶೇರು ಮಾರುಕಟ್ಟೆಯ ಏಳು ಬೀಳು, ಇಂಧನ ಹಾಗೂ ತೈಲ ಬೆಲೆ ಹೆಚ್ಚಳ, ಜಾಗತೀಕರಣ ಎಂದು ಏನೇ ಕಾರಣ ಹೇಳಿದರೂ, ಕಡೆಗೆ ಇದರಿಂದ ಕಷ್ಟಕ್ಕೊಳಗಾಗುತ್ತಿರುವವರು ಸಾಮಾನ್ಯ ಪ್ರಜೆಗಳಾದ ಕಾರ್ಮಿಕರು, ಅದರಲ್ಲಿಯೂ ಅಸಂಘಟಿತ ವಲಯದ ಕಾರ್ಮಿಕರು. ಗಾರ್ಮೆಂಟ್ಸ್ ಉದ್ಯಮದ ಉದಾಹರಣೆ ತೆಗೆದುಕೊಂಡರೆ, ತಿಂಗಳಿಗೆ 2000 ರಿಂದ 2500 ರವರೆಗೆ ಸಂಪಾದಿಸುವ ಕಾರ್ಮಿಕರು ಬೆಂಗಳೂರಿನ ಈ ಬೆಲೆಯೇರಿಕೆಯಲ್ಲಿ ಹೇಗೆ ಜೀವಿಸಬೇಕು?

ಕಳೆದ ನಾಲ್ಕು ತಿಂಗಳಲ್ಲಿ ಅಗತ್ಯ ವಸ್ತುಗಳ ಬೆಲೆಯೆಲ್ಲವೂ ವಿಪರೀತವಾಗಿ ಏರಿಹೋಗಿದೆ. ಪ್ರತಿದಿನ ಅಡುಗೆಗೆ ಉಪಯೋಗಿಸುವ ಕೊತ್ತಂಬರಿ ಸೊಪ್ಪು ಮೊದಲು 50 ಪೈಸೆ, 1 ರೂಪಾಯಿಗೆ ಸಿಗುತ್ತಿತ್ತು. ಈಗ ಕನಿಷ್ಟ 2 ರೂ ಗಳಿಲ್ಲದೆ ದೊರೆಯುತ್ತಿಲ್ಲ. ಅಕ್ಕಿ, ಎಣ್ಣೆ, ಬೇಳೆಗಳು, ಹಾಲು, ಗ್ಯಾಸ್ ಸಿಲಿಂಡರ್, ಸೀಮೆಎಣ್ಣೆ, ತರಕಾರಿಗಳು, ಎಲ್ಲದರ ಬೆಲೆಯೂ ಶೇ. 40ರಷ್ಟು ಏರಿಹೋಗಿದೆ. ಇದರ ಮಧ್ಯೆ, ಮನೆ ಬಾಡಿಗೆ, ಮಕ್ಕಳ ಫೀಸ್, ಪುಸ್ತಕ, ಕರೆಂಟ್ ಬಿಲ್, ನೀರು, ಬಸ್ ಚಾರ್ಜ್ ಒಂದೇ ಎರಡೇ? ಕಾರ್ಮಿಕರು ಹಣವಿಲ್ಲದೆ ಒಂದು ದಿನವೂ ಮನೆಯಿಂದ ಹೊರಗೆ ಕಾಲಿಡಲು ಸಾಧ್ಯವಿಲ್ಲ. ಕಾರ್ಮಿಕರು ತೀರಾ ಸಾಧಾರಣ ಜೀವನ ನಡೆಸಲು ಬೇಕಾಗುವ ಎರಡು ಹೊತ್ತಿನ ಊಟವನ್ನು ಸರಿಯಾಗಿ ಹೊಂದಿಸಿಕೊಳ್ಳುವುದು ಕಷ್ಟವಾಗುತ್ತಿದೆ. ಇನ್ನು ಉತ್ತಮ ದರ್ಜೆಯ ಜೀವನ ಕನಸೇ ಸರಿ. ಇದಕ್ಕೆ ಯಾರು ಹೊಣೆ? ಬಡವರು, ಯಾರಲ್ಲಿ ದೂರಬೇಕು? ವಲಸೆ ಬಂದವರು ಪುನಃ ಹಳ್ಳಿಗೇ ಹೋಗೋಣವೆಂದರೆ, ಅಲ್ಲಿ ಹೋಗಿ ಏನು ಮಾಡಬೇಕು?

ನಮ್ಮ ಸರ್ಕಾರಗಳು ಬೆಲೆಯೇರಿಕೆ ಪರಿಣಾಮವಾಗಿ ಪ್ರಜೆಗಳ ಪರಿಸ್ಥಿತಿ ಯಾವ ಮಟ್ಟಕ್ಕೆ ಮುಟ್ಟಿದೆ ಎಂಬುದನ್ನು ಗಮನಿಸುತ್ತಲೇ ಇಲ್ಲ. ಕಾರ್ಮಿಕರ ವೇತನವನ್ನುಹೆಚ್ಚು ಮಾಡುವ ಯಾವ ಮಾರ್ಗವನ್ನೂ ಕೈಗೊಳ್ಳುತ್ತಿಲ್ಲ. ಅವರ ವೇತನವನ್ನು ಹೆಚ್ಚಿಸುತ್ತಿಲ್ಲ. ಕಳೆದ ಆರು ವರ್ಷದಲ್ಲಿ




ಅಗತ್ಯ ವಸ್ತುಗಳ ಬೆಲೆಯೆಲ್ಲ ಗಗನಕ್ಕೇರಿದ್ದರೂ, ಗಾರ್ಮೆಂಟ್ಸ್ ಉದ್ಯಮದಲ್ಲಿ ಕನಿಷ್ಟ ವೇತನ ಕೇವಲ 101/– ರೂ.ಗಳಾಗಿದೆ ಎಂದರೆ ಕಾರ್ಮಿಕರ ಜೀವನದ ಪರಿಸ್ಥಿತಿಯ ಬಗ್ಗೆ ಯೋಚಿಸಲೇಬೇಕು. ಇದರ ಪರಿಣಾಮವಾಗಿ ಸಾಮಾಜಿಕ ಅಸಮತೋಲನ ಮತ್ತಷ್ಟು ಹೆಚ್ಚುತ್ತಿದೆ.

ಮನುಷ್ಯ ಬದುಕುವುದಕ್ಕೆ ಆಹಾರವೇ ಆಧಾರ, ನಾವು ಯಾವ ರೀತಿಯ ಆಹಾರ ಸೇವಿಸುತ್ತೇವೆಯೋ ಅದರ ಮೇಲೆ ನಮ್ಮ ಶಕ್ತಿ, ಬುದ್ಧಿವಂತಿಕೆ, ಸಾಮರ್ಥ್ಯಗಳು ನಿರ್ಧಾರವಾಗುತ್ತವೆ. ಇಂದು ಗಾರ್ಮೆಂಟ್ಸ್ ಕಾರ್ಮಿಕರು ನಾಲ್ಕು ಮಂದಿ ಇರುವ ಸಾಮಾನ್ಯ ಕಾರ್ಮಿಕರ ಮನೆ ಅತಿ ಕಡಿಮೆ ವೆಚ್ಚದಲ್ಲಿ ಜೀವಿಸಬೇಕೆಂದರೂ ಕನಿಷ್ಠ 8 ಸಾವಿರ ರೂ.ಗಳು ಬೇಕು. ಒಬ್ಬಳೇ ಮಹಿಳೆ ದುಡಿದು, ತನ್ನ ಮಕ್ಕಳನ್ನು ಸಾಕಬೇಕಾದ ಸಂದರ್ಭದಲ್ಲಿ 2500 ರೂ. ಗಳಲ್ಲಿ ಹೇಗೆ ಬದುಕಬೇಕು? ಹಾಗಾಗಿಯೇ ಮಹಿಳೆಯರು ಈ ಸಂದರ್ಭದಲ್ಲಿ ತಮ್ಮ ಆರೋಗ್ಯವನ್ನು ಸಂಪೂರ್ಣವಾಗಿ ನಿರ್ಲಕ್ಷಿಸುತ್ತಾರೆ. ತನ್ನದೇನು ಲೆಕ್ಕ? ಮಕ್ಕಳು ತಿಂದರೆ ಸಾಕು ಎನ್ನುವ ಈ ಮಹಿಳೆಯರಿಗೆ ಕಾರ್ಖಾನೆಗೆ ಬಂದು ದಿನಪೂರ್ತಿ ದುಡಿಯುವುದಕ್ಕೆ ಶಕ್ತಿಯಾದರೂ ಎಲ್ಲಿಂದ ಬರಬೇಕು.

### ಪ್ರೊಡಕ್ಷನ್ ಟಾರ್ಗೆಟ್

ಅಲ್ಲದೆ, ಇಂದು ಗಾರ್ಮೆಂಟ್ಸ್ ಕಾರ್ಖಾನೆಗಳಲ್ಲಿ ಈ ಮಹಿಳಾ ಕಾರ್ಮಿಕರನ್ನು ಕಾಡಿಸುತ್ತಿರುವ ಭೂತವೆಂದರೆ ಪ್ರೊಡಕ್ಷನ್ ಟಾರ್ಗೆಟ್. ಯಾವ ಕಾರ್ಖಾನೆಯಿರಲಿ ಯಾವ ಕೆಲಸವಿರಲಿ, ದಿನಕ್ಕೆ ಇಷ್ಟು ಪ್ರೊಡಕ್ಷನ್



Scanned with OKEN Scanner

ಕೊಡಬೇಕು ಎಂಬ ಲೆಕ್ಕಾಚಾರ. ಅವೈಜ್ಞಾನಿಕವಾಗಿ ಯಾರೋ ಒಬ್ಬ ನಿಗದಿಪಡಿಸಿದ ಈ ಟಾರ್ಗೆಟ್ ಭಾರವನ್ನು ಎಲ್ಲರೂ ಹೊರಬೇಕು. ಅಕಡೆ ಈ ಕಡೆ ನೋಡದೆ, ಸರಿಯಾಗಿ ಊಟಮಾಡಲೂ ಸಮಯವಿರದೆ. ಅರ್ಧ ಗಂಟೆಯ ಊಟದ ಸಮಯದಲ್ಲಿ ಐದು ನಿಮಿಷಕ್ಕೇ ಗಬಗಬನೇ ತಿಂದು ಮಿಶನ್ ಮೇಲೆ ಕೂತು ಕೆಲಸ ಮಾಡಿದರೂ ಮುಗಿಯದ ಪ್ರೊಡಕ್ಷನ್ ಟಾರ್ಗೆಟ್ ಯಾವ ಸೀಮೆಯದ್ದು? ಯಾರು ಇದನ್ನು ನಿಗದಿ ಪಡಿಸಿದವರು? ಉದಾಹರಣೆಗೆ ಗಂಟೆಗೆ 160 ಪೀಸ್ ಪ್ರೊಡಕ್ಷನ್ ಕೊಡಬೇಕೆಂದರೆ ಪ್ರತಿಕ್ಷಣವೂ ಒಂದೇ ಸಮನೆ ದುಡಿಯಬೇಕು. ಹಾಗೆ ದುಡಿದರೂ 8 ಗಂಟೆಯಲ್ಲಿ ಮುಗಿಯದೆ ಮತ್ತೂ 1 ಗಂಟೆ ಕೆಲಸಮಾಡಿದರೆ ಮಾತ್ರ ಈ ಪ್ರೊಡಕ್ಷನ್ ಟಾರ್ಗೆಟ್‌ಅನ್ನು ಮುಟ್ಟಬಹುದು. ಹೀಗೆ ದುಡಿಯಲು, ಅವಳೇನು ಯಂತ್ರವೇ? ಯಂತ್ರವೇ ಕೆಲವೊಮ್ಮೆ ಕೆಟ್ಟುಹೋಗುತ್ತದೆ. ಇವರಿಗೆ ರೋಗವೂ ಬರಬಾರದು. ಸಂಜೆಯ ಹೊತ್ತಿಗೆ ಮಹಿಳೆಯರಲ್ಲಿ ಇದ್ದ ಅಲ್ಪ ಸ್ವಲ್ಪ ಶಕ್ತಿಯೂ ಸೋರಿ ಹೋಗಿರುತ್ತದೆ. ಇಷ್ಟು ಕೆಲಸ ಮಾಡಲು ಒಬ್ಬ ಮಹಿಳೆ ತನ್ನ ಎಷ್ಟು ಶಕ್ತಿಯನ್ನು ವ್ಯಯಿಸಬೇಕು? ಅಷ್ಟು ಶಕ್ತಿ ಅವಳಲ್ಲಿ ಕೂಡಿಕೊಳ್ಳಬೇಕೆಂದರೆ ಎಷ್ಟು ಆಹಾರ ತಿನ್ನಬೇಕು?

ಇತ್ತೀಚೆಗೆ 'ಮುನ್ನಡೆ' ನಡೆಸಿದ ಕಾರ್ಮಿಕರ ಆರೋಗ್ಯ ಶಿಬಿರದಲ್ಲಿ ಮಹಿಳಾ ಕಾರ್ಮಿಕರಿಗೆ ಕಂಡುಬಂದ ಮುಖ್ಯ ತೊಂದರೆ ಎಂದರೆ ರಕ್ತಹೀನತೆ. ಭಾಗವಹಿಸಿದ್ದ ಸುಮಾರು ಶೇ. 50ರಷ್ಟು ಕಾರ್ಮಿಕರು ಈ ತೊಂದರೆಯಿಂದ ಬಳಲುತ್ತಿದ್ದರು. ಜೊತೆಗೆ ಕಾರ್ಖಾನೆಗಳಲ್ಲಿ ಮಹಿಳಾ ಕಾರ್ಮಿಕರು ತಲೆ ತಿರುಗಿ ಬೀಳುವ ಉದಾಹರಣೆಗಳು ಹೆಚ್ಚಾಗುತ್ತಿದೆ. ಅತೀವ ಒತ್ತಡ, ಅಪೌಷ್ಟಿಕತೆ, ನಿಶ್ಶಕ್ತಿ, ಹತಾಶೆಗಳು ಇದಕ್ಕೆ ಕಾರಣವಿರಬಹುದು. ಇದೆಲ್ಲದಕ್ಕೂ ಪರಿಹಾರವೇ ಇಲ್ಲವೇ?

**ಮುನ್ನಡೆ ಹಾಗೂ GATWU ಈ ನಿಟ್ಟಿನಲ್ಲಿ ಮಾಡಿರುವ ಕೆಲವು ಪ್ರಯತ್ನಗಳು.**

ಪ್ರಸ್ತುತ, ಗಾರ್ಮೆಂಟ್ಸ್ ಕಾರ್ಮಿಕರಿಗೆ ಸರ್ಕಾರ ನಿಗದಿಪಡಿಸಿರುವ ಕನಿಷ್ಠ ವೇತನ 101/– ರೂ. (ಡಿ.ಎ. ಸೇರಿ)ಗಳಿವೆ. ಮುನ್ನಡೆ ಹಾಗೂ ಯೂನಿಯನ್ ಎರಡೂ ಸಂಘಟನೆಗಳು ಗಾರ್ಮೆಂಟ್ಸ್ ಕಾರ್ಮಿಕರಿಗೆ ರೂ. 200/– ಗಳನ್ನಾದರೂ ಕನಿಷ್ಠವೇತನವನ್ನಾಗಿ ನಿಗದಿ ಪಡಿಸಬೇಕೆಂದು 2007ರಲ್ಲಿ ಕನಿಷ್ಠ ವೇತನ ಆಂದೋಲನವನ್ನು ಹಮ್ಮಿಕೊಂಡಿತ್ತು.

ಅಲ್ಲದೆ ಗಾರ್ಮೆಂಟ್ಸ್ ಉದ್ಯಮಕ್ಕೆ ನಿಗದಿ ಪಡಿಸಿರುವ ಕನಿಷ್ಠ ವೇತನವನ್ನು ಪರಿಷ್ಕರಿಸಬೇಕೆಂದು ಈಗಾಗಲೇ ಸರ್ಕಾರಕ್ಕೆ ಎರಡು ಬಾರಿ ಜ್ಞಾಪನಾ ಪತ್ರವನ್ನು ನೀಡಲಾಗಿದೆ. ಪುನಃ ಕಳೆದ ತಿಂಗಳು ಅಂದರೆ ಅಗಸ್ಟ್ 31 ರಂದು ಮಾನ್ಯ ಕಾರ್ಮಿಕ ಮಂತ್ರಿಗಳಿಗೆ, ಕನಿಷ್ಠ ವೇತನದ ಪರಿಷ್ಕರಣೆಯ ಬಗ್ಗೆ ಜ್ಞಾಪನಾ ಪತ್ರವನ್ನು ನೀಡಲಾಗಿದೆ. ಅದರ ಸಂಕ್ಷಿಪ್ತ ರೂಪವನ್ನು ಈ ಸಂಚಿಕೆಯಲ್ಲಿ ನೀಡಿದ್ದೇವೆ. ❑

## ಆಗಸ್ಟ್ 20 : ಮಹಾ ಮುಷ್ಕರ

**ಆಗಸ್ಟ್ 20 ಬುಧವಾರ 10 ಗಂಟೆಯಿಂದ ಸುಮಾರು 3 ಗಂಟೆಯವರೆಗೂ ನಗರದ ಮೈಸೂರು ರಸ್ತೆಯಲ್ಲಿರುವ ಬ್ಯಾಟರಾಯನಪುರದಿಂದ ಗುಡ್ಡದಹಳ್ಳಿಯವರೆಗೂ ಎಲ್ಲಿ ನೋಡಿದರೂ ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರು! !**



ದಿನಾಂಕ 20.8.2009 ರಂದು ಸುಮಾರು 6 ಸಾವಿರ ಗಾರ್ಮೆಂಟ್ಸ್ ಕಾರ್ಮಿಕರು ನಗರದ ಮೈಸೂರು ರಸ್ತೆಯಲ್ಲಿ ರ್‍ಯಾಲಿ ನಡೆಸಿ ಪ್ರತಿಭಟನಾ ಸಭೆಯನ್ನು ನಡೆಸಿದರು. ಪ್ರವಾಹೋಪಾದಿಯಲ್ಲಿ ನೆರೆದ ಈ ಕಾರ್ಮಿಕ ಸ್ತೋಮ ಬ್ಯಾಟರಾಯನಪುರ ಟಿಂಬರ್‌ಯಾರ್ಡ್ ಲೇಔಟ್, ಹಾಗೂ ಮೈಸೂರು ರಸ್ತೆಯಲ್ಲಿ ಕಾರ್ಮಿಕ ಕಾನೂನುಗಳನ್ನು ಸಡಿಲಗೊಳಿಸಲು ಸಜ್ಜಾಗಿರುವ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ವಿರುದ್ಧ ಘೋಷಣೆಗಳನ್ನು ಕೂಗಿ ತಮ್ಮ ಅಸ್ತಿತ್ವವನ್ನು ಮೆರೆದರು.

ಅಖಿಲ ಭಾರತ ಟ್ರೇಡ್ ಯೂನಿಯನ್‌ಗಳ ಜಂಟಿ ಸಮಿತಿಯು, ಆಗಸ್ಟ್ 20 ರಂದು ದೇಶಾದ್ಯಂತ ಮುಷ್ಕರ ಘೋಷಿಸಿತ್ತು, ಬೆಲೆಯೇರಿಕೆ ಕಾರ್ಮಿಕ ಕಾನೂನುಗಳ ಸಡಿಲೀಕರಣ, ಹಾಗೂ ಎಸ್.ಇ.ಜಡ್.ಗಳನ್ನು ವಿರೋಧಿಸಿ, ಕರೆದಿದ್ದ ಈ ಮುಷ್ಕರಕ್ಕೆ ವ್ಯಾಪಕ ಬೆಂಬಲ ದೊರೆತಿದ್ದರೂ ಗಾರ್ಮೆಂಟ್ಸ್ ಕಾರ್ಖಾನೆಗಳು ಕಾರ್ಮಿಕರನ್ನು ಬೆದರಿಸಿ ಕೆಲಸ ಮಾಡಿಸುತ್ತಿದ್ದವು.

ಮೈಸೂರು ರಸ್ತೆಯ ಬಾಂಬೆರೆಯಾನ್ ಫ್ಯಾಷನ್ಸ್ ಲಿ. ನ ನೂರಾರು ಕಾರ್ಮಿಕರು ಬಿ.ಎಚ್.ಇ.ಎಲ್ ಎದುರು ಇರುವ ಟೆಕ್ಸ್ ಪೋರ್ಟ್ಸ್ ಕ್ರಿಯೇಷನ್ಸ್ ಕಾರ್ಖಾನೆಗೆ ಮುತ್ತಿಗೆ ಹಾಕಿ ಕಾರ್ಮಿಕರಿಗೆ ಹೊರಬರುವಂತೆ ಉತ್ತೇಜಿಸಿ ಬೆಂಬಲ ನೀಡಿದರು. ಇದರ ಪರಿಣಾಮವಾಗಿ ಟೆಕ್ಸ್ ಪೋರ್ಟ್ಸ್ ಕ್ರಿಯೆಷನ್ಸ್‌ನ ಸುಮಾರು 800 ಕಾರ್ಮಿಕರು ಹೊರಬಂದು ಪಕ್ಕದಲ್ಲಿಯೇ ಇರುವ ವಿ.ಕೆ.ಎನ್ ಇನ್‌ವೆಸ್ಟ್‌ಮೆಂಟ್ ಹಾಗೂ ವಿವೇಕ್ ಇಂಡಸ್ಟ್ರೀಸ್ (ಲೀಲಾ ಸ್ಕಾಟಿಶ್ ಲೇಸ್ ಪ್ರೈ. ಲಿ.) ಕಾರ್ಮಿಕರನ್ನೂ ಹೊರಗೆ ಬರುವಂತೆ ಮಾಡಿ ಅಲ್ಲಿಂದ ಬ್ಯಾಟರಾಯನಪುರದ ಮೂಲಕ, ಟಿಂಬರ್ ಯಾರ್ಡ್ ಲೇಔಟ್ ಗೆ ಜಾಥಾ ನಡೆಸಿದರು. ಅಲ್ಲಿರುವ ಶಾಲಿನಿ ಕ್ರಿಯೆಶನ್ಸ್ ಹಾಗೂ ಸಕ್ಸಸ್ ಅಪಾರೆಲ್ಸ್ ನ ಕಾರ್ಮಿಕರೂ ಇವರ ಜೊತೆಗೆ ಸೇರಿ ಒಟ್ಟು ಸುಮಾರು ನಾಲ್ಕು ಸಾವಿರ ಕಾರ್ಮಿಕರ ಜಾಥಾವು ಪುನಃ ಮೈಸೂರು ರಸ್ತೆಯ ಗುಡ್ಡದಹಳ್ಳಿಯ ಕಡೆಗೆ ನಡೆಯಿತು.

ಗುಡ್ಡದ ಹಳ್ಳಿಯಲ್ಲಿರುವ ವಿಗೋಸಾ ಎಕ್ಸ್‌ಪೋರ್ಟ್ಸ್, ಹಿಂದೂಜಾ ಪ್ರೊಸೆಸಿಂಗ್ ಅಂಡ್ ಫಿನಿಷಿಂಗ್ (ಹೆಚ್ ಪಿ.ಎಫ್) ಕಾರ್ಖಾನೆಯ ಅವರಣದಲ್ಲಿ ಬೃಹತ್ ಸಭೆ ನಡೆಸಿತು. ಸುಮಾರು 10 ಸಾವಿರ ಮಂದಿ ನೆರೆದ ಈ ಬೃಹತ್ ಕಾರ್ಮಿಕ ಸ್ತೋಮ ಸಭೆಯ ನಂತರ ಚದುರಿತು.

ಒಟ್ಟಾಗಿ ಕೂಡಿದಾಗ ಎಷ್ಟು ಉತ್ಸಾಹ ಆತ್ಮವಿಶ್ವಾಸ ಬರುತ್ತದೆ ಎಂದು ಕಾರ್ಮಿಕರು ಆ ದಿನದ ಅನುಭವದಿಂದ ಕಂಡುಕೊಂಡಿದ್ದಾರೆ. ಗಾರ್ಮೆಂಟ್ಸ್ ಇತಿಹಾಸದಲ್ಲಿಯೆ ಹೊಸ ಅಧ್ಯಾಯ ಬರೆದ ಈ ಕಾರ್ಮಿಕರೆಲ್ಲರನ್ನೂ ಮುನ್ನಡೆ ಹೃತ್ಪೂರ್ವಕವಾಗಿ ಅಭಿನಂದಿಸುತ್ತದೆ.

### Spontaneous response

Special Correspondent

**BANGALORE:** A large number of garment workers on Mysore Road joined the all-India strike on Wednesday by taking out a spontaneous rally and holding a public meeting.

Thousands of workers from nine units on Mysore Road walked out of the factories and took out a rally in support of the trade union strike, which is a first for the large workforce of garment industry employees in Bangalore, consisting mostly women working on contract basis.

The meeting was addressed by Jayaram K.R. of the Garment and Textile Workers' Union, Rukmini of Garment Mahila Karmikara Munnade and workers' representatives. The workers took an oath not to work on forced overtime.

'ದಿ ಹಿಂದು', ದಿನಾಂಕ 21-8-08



Scanned with OKEN Scanner

## "ಗಾರ್ಮೆಂಟ್ಸ್ ಕಾರ್ಮಿಕರ ಮೇಲೆ ಲೈಂಗಿಕ ಕಿರುಕುಳವಾದ ಬಗ್ಗೆ ಯಾವುದೇ ವರದಿಯಾಗಿಲ್ಲ"

*– ಬಿ.ಎನ್ ಬಚ್ಚೇಗೌಡ*

ದಿನಾಂಕ 1.8.2008ರ ಪ್ರಜಾವಾಣಿ.

### ಗಾರ್ಮೆಂಟ್ಸ್: 3.55 ಲಕ್ಷ ಕಾರ್ಮಿಕರು



ಇದು ವಿಧಾನ ಸಭೆಯ ಅಧಿವೇಶನದಲ್ಲಿ ಶಾಸಕ ಶ್ರೀ ನೆ.ಲ ನರೇಂದ್ರ ಬಾಬುರವರ ಪ್ರಶ್ನೆಯೊಂದಕ್ಕೆ ಉತ್ತರಿಸುತ್ತಾ ಮಾನ್ಯ ಕಾರ್ಮಿಕ ಮಂತ್ರಿಗಳು ನೀಡಿದ ಹೇಳಿಕೆ. ಇದನ್ನು ಕೇಳಿದರೆ ಯಾವ ಗಾರ್ಮೆಂಟ್ಸ್ ಕಾರ್ಮಿಕರ ಬಗ್ಗೆ ಈ ರೀತಿಯ ಹೇಳಿಕೆ ಮಂತ್ರಿಗಳು ನೀಡುತ್ತಿದ್ದಾರೆ ಎಂಬ ಅನುಮಾನ ಹಾಗೂ ಆಶ್ಚರ್ಯ ಎರಡು ಒಟ್ಟಿಗೇ ಆಗುತ್ತದೆ. ನಾವು ಮಹಿಳಾ ಕಾರ್ಮಿಕರು ಪ್ರತಿನಿತ್ಯ ಗಾರ್ಮೆಂಟ್ಸ್ ಕಾರ್ಖಾನೆಗಳಲ್ಲಿ ಅನುಭವಿಸುತ್ತಿರುವ ಶೋಷಣೆ ಕಿರುಕುಳದ ಬಗ್ಗೆ ತಿಳಿಯದೆ ನೀಡಿರುವ ಹೇಳಿಕೆ ಇದು ಎಂದು ಮೇಲ್ನೋಟಕ್ಕೇ ತಿಳಿಯುತ್ತದೆ. ಪ್ರತಿ ದಿನ ಪ್ರತಿ ಕ್ಷಣ ಒಬ್ಬರಲ್ಲ ಒಬ್ಬರು ಗಾರ್ಮೆಂಟ್ಸ್ ಕಾರ್ಖಾನೆಗಳಲ್ಲಿ ಲೈಂಗಿಕ ಕಿರುಕುಳ ಎದುರಿಸುತ್ತಿದ್ದು, ಇಲ್ಲಿಯವರೆಗೂ ಮುನ್ನಡೆಯೇ ಹಲವಾರು ಲೈಂಗಿಕ ದೌರ್ಜನ್ಯದ ದೂರುಗಳನ್ನು ಸರ್ಕಾರದ ವಿವಿಧ ಇಲಾಖೆಗೆ ಸಲ್ಲಿಸಿದೆ.

### Minister's remark draws workers' ire

Bacche Gowda had said that there were no reports of sexual harassment

Special Correspondent

* Organisation produces records of seven complaints

"Suffering abuse has become a way of life"

*'ದಿ ಹಿಂದು' 2–8–08*

ಗಾರ್ಮೆಂಟ್ಸ್ ಕಾರ್ಖಾನೆಗಳಲ್ಲಿ ಲೈಂಗಿಕ ಕಿರುಕುಳವಾಗುವ ಪ್ರಮಾಣಕ್ಕೂ ಸರ್ಕಾರದಲ್ಲಿ ದಾಖಲಾಗಿರುವ ದೂರಿನ ಪ್ರಮಾಣಕ್ಕೂ ವ್ಯತ್ಯಾಸವಿರಬಹುದು. ಆದರೆ ಮಹಿಳೆಯರು ಧೈರ್ಯದಿಂದ ಮುಂದೆ ಬಂದು ತಮ್ಮ ಮೇಲೆ ದೌರ್ಜನ್ಯವಾಗಿದ್ದರ ಬಗ್ಗೆ ದೂರು ನೀಡುವ ಪ್ರಮಾಣ ಯಾದರೂ ಎಲ್ಲಿದೆ? ದೂರು ಇಲ್ಲವೆಂದಾಕ್ಷಣ ಲೈಂಗಿಕ ಕಿರುಕುಳವೇ ಆಗುತ್ತಿಲ್ಲ ಎಂಬ ನಿರ್ಣಯಕ್ಕೆ ಬರುವುದು ತಪ್ಪು.

ಪತ್ರಿಕೆಯಲ್ಲಿ ಈ ಹೇಳಿಕೆ ಬಂದ ಮರುದಿನವೇ ಮುನ್ನಡೆ ಕಾರ್ಯೋನ್ಮುಖವಾಗಿ ಇಲ್ಲಿಯವರೆಗೂ ಮುನ್ನಡೆಯು ಕರ್ನಾಟಕ ರಾಜ್ಯ ಮಹಿಳಾ ಆಯೋಗ, ಪೊಲೀಸ್ ಠಾಣೆ, ಹಾಗೂ ಕಾರ್ಮಿಕ ಇಲಾಖೆಗೆ ಸಲ್ಲಿಸಿರುವ ವಿವಿಧ ದೂರುಗಳ ಪ್ರತಿಗಳೊಂದಿಗೆ ಶಾಸಕ ನೆ.ಲ. ನರೇಂದ್ರ ಬಾಬು ಹಾಗೂ ಪತ್ರಿಕೆಗಳನ್ನು ಸಂಪರ್ಕಿಸಿತು.

ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲೆ ನಡೆಯುವ ಲೈಂಗಿಕ ಕಿರುಕುಳಗಳು ನಿಲ್ಲಲು, ವಿಚಾರಿಸಲು ಕ್ರಮ ಕೈಗೊಳ್ಳಬೇಕೆಂದು ದೇಶದ ಸುಪ್ರೀಂ ಕೋರ್ಟ್ ವಿಶಾಖಾ ತೀರ್ಪಿನ ಗೈಡ್ ಲೈನ್ ಸೂಚಿಸುತ್ತದೆ. ಲೈಂಗಿಕ ಕಿರುಕುಳ ದೂರು ಸಮಿತಿ ಇರಬೇಕೆಂದು ಸೂಚಿಸುತ್ತದೆ. ಆದರೆ ಇದು ಎಷ್ಟರ ಮಟ್ಟಿಗೆ ಪಾಲನೆಯಾಗುತ್ತಿದೆ ಎಂಬುದು ಸರ್ಕಾರ ಪರಿಶೀಲಿಸಿ, ಕ್ರಮ ಕೈಗೊಳ್ಳಬೇಕೆಂದು ಮುನ್ನಡೆ ಈ ಮೂಲಕ ಆಗ್ರಹಿಸುತ್ತದೆ.

***ಸಮಸ್ಯೆಯನ್ನು ಗುರುತಿಸದಿದ್ದರೆ ಅದು ಸಮಸ್ಯೆ ಎಂದು ಎನಿಸುವುದೇ ಇಲ್ಲ.***

## ಮಾಹಿತಿ — ಕಾರ್ಮಿಕರೇ ಗಮನಿಸಿ....

ವರ್ಷವಿಡೀ ದುಡಿದು ದಣಿಯುವ ನಮಗೆ ಸಂತಸ ತರುವ ವಿಷಯವೆಂದರೆ, "ವರ್ಷಕ್ಕೊಮ್ಮೆ ಆಯುಧಪೂಜೆಯ ಸಮಯದಲ್ಲಿ ಕಾರ್ಖಾನೆಯಲ್ಲಿ ನಮಗೆ ದೊರಕುವ ಬೋನಸ್" ತಿಂಗಳ ಸಂಬಳಕ್ಕೆ ತಕ್ಕಂತೆ ನಮ್ಮ ಖರ್ಚನ್ನು ನಿಗದಿಪಡಿಸಿಕೊಂಡು ಬದುಕುವ ನಮಗೆ ಈ ಸಮಯ ಬಹಳ ಸಂತೋಷಕೊಡುತ್ತದೆ.

ಪ್ರತಿ ವರ್ಷ ಏಪ್ರಿಲ್ 1 ರಿಂದ ಮಾರ್ಚ್ 31 ರ ವರೆಗೆ ಬೋನಸ್ ಅನ್ನು ಲೆಕ್ಕಾಚಾರ ಮಾಡಲಾಗುತ್ತದೆ. ಆ ಅವಧಿಯಲ್ಲಿ ಕೆಲಸ ಮಾಡುವ (ಕನಿಷ್ಠ 1 ತಿಂಗಳು) ಪ್ರತಿಯೊಬ್ಬ ಕಾರ್ಮಿಕರೂ ಸಹ ಬೋನಸ್ ಪಡೆಯಲು ಅರ್ಹರಾಗಿರುತ್ತಾರೆ.

ಸ್ನೇಹಿತರೇ ಗಮನಿಸಿ, ಕೆಲವು ಕಾರ್ಖಾನೆಗಳಲ್ಲಿ ಕೆಲಸ ಬಿಟ್ಟವರಿಗೆ ಬೋನಸ್ ಕೊಡುವುದಿಲ್ಲ ಎಂದು ಕಾರ್ಮಿಕರನ್ನು ವಂಚಿಸುತ್ತಿದ್ದಾರೆ. ಇದು ಕಾನೂನು ಪ್ರಕಾರ ಅಪರಾಧವಾಗುತ್ತದೆ. ಯಾವುದೇ ಕಾರ್ಮಿಕರು ಏಪ್ರಿಲ್‌ನಲ್ಲಿ ಕೆಲಸ ಬಿಟ್ಟಿದ್ದರೂ ಸಹ ಅವರಿಗೆ ಅಕ್ಟೋಬರ್‌ನಲ್ಲಿ ಬೋನಸ್ ನೀಡುವುದು ಮಾಲೀಕರ ಕರ್ತವ್ಯವಾಗಿರುತ್ತದೆ. ಕಾರ್ಮಿಕರು ಈ ಕಾನೂನುಗಳನ್ನು ತಿಳಿದುಕೊಳ್ಳದೆ ಇರುವುದರಿಂದ ಮಾಲೀಕರು ಹೇಳುವುದು ನಿಜವೇನೋ ಎಂದು ಸುಮ್ಮನಾಗುತ್ತಿದ್ದಾರೆ.

ದಯವಿಟ್ಟು ಜಾಗೃತರಾಗಿರಿ, ಬೋನಸ್ ಪಡೆಯುವುದು ನಮ್ಮ ಹಕ್ಕು. ಕೆಲಸ ಬಿಟ್ಟವರೂ ಸಹ ಆ ವರ್ಷದ ಬೋನಸ್ ಪಡೆಯಲು ಅರ್ಹರಾಗಿರುತ್ತಾರೆ. ತಪ್ಪದೆ ತಮ್ಮ ಬೋನಸ್ ಅನ್ನು ಪಡೆದುಕೊಳ್ಳಿ, ಹೆಚ್ಚಿನ ಮಾಹಿತಿಗಾಗಿ **GATWU** ಅನ್ನು ಈ ಸಂಖ್ಯೆಗಳಲ್ಲಿ ಸಂಪರ್ಕಿಸಿ: **998A863795, 988A371922.**



Scanned with OKEN Scanner

# ಗಾರ್ಮೆಂಟ್ಸ್ ಉದ್ಯಮದ ಕನಿಷ್ಠ ವೇತನದ ಪರಿಷ್ಕರಣೆಯ ಬಗ್ಗೆ ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್ (GATWU) ದಿನಾಂಕ 31–8–08ರಂದು ಸರ್ಕಾರಕ್ಕೆ ಸಲ್ಲಿಸಿದ ಜ್ಞಾಪನಾ ಪತ್ರದ ಸಂಕ್ಷಿಪ್ತ ರೂಪ



ಶ್ರೀ ಬಿ.ಎನ್ ಬಚ್ಚೇಗೌಡರು, ಮಾನ್ಯ ಕಾರ್ಮಿಕ ಸಚಿವರು ಇವರಿಗೆ, ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್ (GATWU)ನ ಸದಸ್ಯರು ಸಲ್ಲಿಸುತ್ತಿರುವ ಜ್ಞಾಪನಾ ಪತ್ರ

**ಬೆಂ**ಗಳೂರು ನಗರ, ದೇಶದಲ್ಲಿಯೇ ಇಂದು ಅತಿದೊಡ್ಡ ಸಿದ್ಧ ಉಡುಪು ಉತ್ಪಾದನೆಯ ನಗರವೆಂದು ಗುರುತಿಸಿಕೊಳ್ಳುತ್ತಿದೆ. ಇಲ್ಲಿ ಸಿದ್ಧವಾಗುವ ಉಡುಪುಗಳು, ಜಗತ್ತಿನಾದ್ಯಂತ ಇರುವ ಪ್ರಸಿದ್ಧ ಮಾರುಕಟ್ಟೆಗಳಿಗೆ ತಯಾರಾಗುತ್ತಿವೆ. 2004ರ ಡಿಸೆಂಬರ್‌ನಲ್ಲಿ ಮಲ್ಟಿ ಫೈಬರ್ ಅಗ್ರಿಮೆಂಟ್ (Multi Fibre Agreement) ರದ್ದಾದ ನಂತರ ಇದ್ದ ಕಟ್ಟುಪಾಡುಗಳು ಕಳಚಿ, ಉದ್ಯಮ ಅತಿ ವೇಗವಾಗಿ ಬೆಳೆಯುತ್ತಿದೆ. ಕೆಲವು ಬೃಹತ್ ಕಂಪನಿಗಳು ವರ್ಷಕ್ಕೆ ಕನಿಷ್ಠ 100 ಕೋಟಿಗೂ ಹೆಚ್ಚು ವಹಿವಾಟು ನಡೆಸುತ್ತಿದ್ದು, 10 ಸಾವಿರಕ್ಕೂ ಮೀರಿ ಕಾರ್ಮಿಕರಿಗೆ ಕೆಲಸ ನೀಡುತ್ತಿವೆ. ಉದ್ಯಮಕ್ಕೆ ಬರುತ್ತಿರುವ ಲಾಭಾಂಶವು ಎಲ್ಲ ರೀತಿಯಿಂದಲೂ ಗಣನೀಯವಾಗಿ ಹೆಚ್ಚಾಗುತ್ತಿದೆ.

ಈ ಉದ್ಯಮವು ಇಂದು ಬೆಂಗಳೂರು ನಗರದಲ್ಲಿ ಅತಿ ಹೆಚ್ಚು ಜನರಿಗೆ ಉದ್ಯೋಗ ಒದಗಿಸಿದೆ ಎಂಬುದೂ ತಮಗೆ ತಿಳಿದಿದೆ. ವಿಧಾನ ಸಭೆಯಲ್ಲಿ ತಾವೇ ಉಲ್ಲೇಖಿಸಿರುವ ಪ್ರಕಾರ, ಬೆಂಗಳೂರಿನಲ್ಲಿ ಸುಮಾರು 920 ಕಾರ್ಖಾನೆಗಳಿದ್ದು, ಸುಮಾರು 3.55 ಲಕ್ಷ ಕಾರ್ಮಿಕರು ದುಡಿಯುತ್ತಿದ್ದಾರೆ. ಪ್ರಸ್ತುತ ಅಂಕಿ ಅಂಶವನ್ನು ಲೆಕ್ಕ ಹಾಕಿದರೆ, ಈ ಕಾರ್ಮಿಕರ ಸಂಖ್ಯೆ ಸುಮಾರು 5 ಲಕ್ಷ ವಾಗುತ್ತದೆ.

ಈ ಉದ್ಯಮದಲ್ಲಿ ದುಡಿಯುತ್ತಿರುವವರು ಹೆಚ್ಚಿನವರು ಮಹಿಳೆಯರಾಗಿದ್ದು, ಉದ್ಯೋಗಕ್ಕಾಗಿ ಗ್ರಾಮೀಣ ಪ್ರದೇಶದಿಂದ ವಲಸೆ ಬಂದವರಾಗಿದ್ದಾರೆ. ಅವರಲ್ಲಿ ಹೆಚ್ಚಿನವರು ದಲಿತರು ಹಾಗೂ ಅಲ್ಪಸಂಖ್ಯಾತರು. ಈ ಮಹಿಳೆಯರಲ್ಲಿ, ಬಹುಪಾಲು ಮಂದಿ, ಏಕಾಂಗಿಯಾಗಿ ಕುಟುಂಬದ ಜವಾಬ್ದಾರಿಯನ್ನು ಹೊತ್ತಿದ್ದು, ತಮ್ಮ ಮೇಲೆ ಅವಲಂಬಿತರಾದ ಇತರ ಕುಟುಂಬ ಸದಸ್ಯರನ್ನು ನೋಡಿಕೊಳ್ಳುತ್ತಿದ್ದಾರೆ. ಈ ಕಾರ್ಮಿಕರೆಲ್ಲರಿಗೂ ಸರ್ಕಾರದಿಂದ ನಿಗದಿಯಾದ ಕನಿಷ್ಠವೇತನವೇ ದೊರೆಯುತ್ತಿದ್ದು, ಎಷ್ಟೋ ಕಾರ್ಖಾನೆಗಳು ಅದಕ್ಕಿಂತ ಕಡಿಮೆ ವೇತನವನ್ನು ನೀಡುತ್ತಿವೆ. ಜೊತೆಗೆ ಯಾವುದೇ ಹೆಚ್ಚುವರಿ ಭತ್ಯೆ ನೀಡದೆ 8 ಗಂಟೆಗಳಿಗಿಂತ ಹೆಚ್ಚಾಗಿ ಕಾರ್ಮಿಕರನ್ನು ದುಡಿಸಿಕೊಳ್ಳುತ್ತಿವೆ.

ಅತ್ಯಂತ ವೇಗವಾಗಿ ಮತ್ತು ಲಾಭದಲ್ಲಿ ಬೆಳೆಯುತ್ತಿರುವ ಈ ಉದ್ಯಮದಲ್ಲಿ ಶೋಷಣೆಗೊಳಗಾಗುತ್ತಿರುವ ಕಾರ್ಮಿಕ ಸಮುದಾಯಕ್ಕೆ, ನ್ಯಾಯಯುತವಾದ ವೇತನವನ್ನು ನಿಗದಿ ಮಾಡುವುದು ತಮ್ಮ ಸರ್ಕಾರದ ಪ್ರಮುಖ ಆದ್ಯತೆಯಾಗಬೇಕು ಎಂದು ಈ ಮೂಲಕ ಒತ್ತಿ ಹೇಳುತ್ತಿದ್ದೇವೆ.

ಗಾರ್ಮೆಂಟ್ಸ್‌ಗಳನ್ನುಉತ್ಪಾದಿಸುವ ದೇಶದ ಪ್ರಮುಖ ರಾಜ್ಯಗಳಾದ ಮಹಾರಾಷ್ಟ್ರ, ದೆಹಲಿ, ಹರಿಯಾಣ, ಉತ್ತರ ಪ್ರದೇಶದಲ್ಲಿ ನಿಗದಿಗೊಳಿಸಿರುವ ಕನಿಷ್ಠವೇತನವು ಕರ್ನಾಟಕ ಹಾಗೂ ಬೆಂಗಳೂರಿಗಿಂತ ಹೆಚ್ಚಾಗಿದೆ. ಈ ರಾಜ್ಯಗಳ ಕನಿಷ್ಠ ವೇತನಗಳನ್ನು ಕರ್ನಾಟಕ ರಾಜ್ಯಕ್ಕೆ ಹೋಲಿಸುವ ಪಟ್ಟಿಯನ್ನು ಈ ಕೆಳಗೆ ನೀಡಲಾಗಿದೆ.

### ಕನಿಷ್ಠ ವೇತನದ ಹೋಲಿಕೆ

| ರಾಜ್ಯಗಳು | ಕುಶಲವಲ್ಲದ | ಅತಿಕುಶಲ |
|---|---|---|
| ಮಹಾರಾಷ್ಟ್ರ (ಮುಂಬೈ) | Rs. 170.92 | Rs. 178.61 |
| ದೆಹಲಿ | Rs. 140.00 | Rs. 156.00 |
| ಹರಿಯಾಣ | Rs. 138.00 | Rs. 163.00 |
| ಉತ್ತರ ಪ್ರದೇಶ | Rs. 113.70 | Rs. 143.87 |
| ಕರ್ನಾಟಕ (ಬೆಂಗಳೂರು) | Rs. 101.70 | Rs. 108.70 |

### ನಮ್ಮ ಬೇಡಿಕೆಗಳು

ಈಗ ಗಾರ್ಮೆಂಟ್ಸ್ ಉದ್ಯಮಕ್ಕೆ ನಿಗದಿ ಪಡಿಸಿರುವ ಕನಿಷ್ಠ ವೇತನವು ಯಾವ ರೀತಿಯಲ್ಲಿಯೂ ಸಾಲುವುದಿಲ್ಲ. ಇದು ಬೆಂಗಳೂರಿನ ಕಾರ್ಮಿಕರ



Scanned with OKEN Scanner

ಜೀವನಕ್ಕೆ ಬೇಕಾಗಿರುವ ನ್ಯಾಯಯುತ ಕನಿಷ್ಠ ವೇತನವನ್ನು ಒಳಗೊಂಡಿಲ್ಲ ಎಂದು ನಾವು ಈ ಮೂಲಕ ಸ್ಪಷ್ಟ ಪಡಿಸುತ್ತಿದ್ದೇವೆ. ಅಲ್ಲದೇ 2004ರ ಡಿಸೆಂಬರ್‌ನಲ್ಲಿ ರದ್ದಾದ ಮಲ್ಟಿ ಫೈಬರ್ ಅಗ್ರಿಮೆಂಟ್ (Multi Fiber Agreement)ನ ನಂತರ ಉಂಟಾಗಿರುವ ಉದ್ಯಮದ ಬೆಳವಣಿಗೆಯನ್ನು ಸಹ ಇದು ಪರಿಗಣಿಸಿಲ್ಲ.

ಈ ಹಿನ್ನೆಲೆಯಲ್ಲಿ ನಾವು ಈ ಕೆಳಗಿನ ಬೇಡಿಕೆಗಳನ್ನು ಮಂಡಿಸುತ್ತಿದ್ದೇವೆ.

1. ಗಾರ್ಮೆಂಟ್ಸ್ ಉದ್ಯಮದಲ್ಲಿ ದುಡಿಯುವ ಹೆಲ್ಪರ್ ವರ್ಗಕ್ಕೆ ದಿನವೊಂದಕ್ಕೆ ರೂ. 200 ಗಳು ಶಾಸನ ಬದ್ಧ ಕನಿಷ್ಠ ವೇತನವಾಗಿ ದೊರೆಯಬೇಕು. ಇದು ತಿಂಗಳಿಗೆ (26 ದಿನದ ಲೆಕ್ಕದಂತೆ) 5200 ರೂ.ಗಳಾಗುತ್ತದೆ.

2. ರಾಮನಗರ, ದೊಡ್ಡಬಳ್ಳಾಪುರ, ನೆಲಮಂಗಲ, ಆನೇಕಲ್ ಹೊಸಕೋಟೆ ಮುಂತಾದ ಬೆಂಗಳೂರು ಗ್ರಾಮಾಂತರ ಪ್ರದೇಶಗಳನ್ನು ವಲಯ 3 ಎಂದು ಗುರುತಿಸಲಾಗಿದ್ದು, ಬೆಂಗಳೂರು ನಗರ ಹಾಗೂ ಈ ಪ್ರದೇಶಗಳ ನಡುವೆ ಇರುವ ಸ್ಥಳಗಳನ್ನು ವಲಯ 4 ಎಂದು ಗುರುತಿಸಲಾಗಿದೆ. ಬೆಂಗಳೂರು ನಗರವು ವಿಸ್ತೃತವಾಗಿ ಬೆಳೆಯುತ್ತಿರುವ ಸಂದರ್ಭದಲ್ಲಿ ಈ ಸ್ಥಳಗಳೆಲ್ಲವೂ ಬೆಂಗಳೂರೆಂದೇ ಗುರುತಿಸಿಕೊಳ್ಳುತ್ತಿವೆ. ಈ ಪ್ರದೇಶಗಳ ಜೀವನ ನಿರ್ವಹಣಾ ವೆಚ್ಚದಲ್ಲಿ ಯಾವುದೇ ವ್ಯತ್ಯಾಸವಿಲ್ಲದುದರಿಂದ, ಈ ಪ್ರದೇಶಗಳನ್ನು ವಲಯಗಳನ್ನಾಗಿ ವಿಂಗಡಿಸಿ, ಬೇರೆ ಬೇರೆ ಕನಿಷ್ಠ ವೇತನವನ್ನು ನಿಗದಿ ಮಾಡುವುದರಲ್ಲಿ ಅರ್ಥವಿಲ್ಲ ಎನಿಸುತ್ತದೆ. ಆದ್ದರಿಂದ ಈ ನಾಲ್ಕು ವಲಯಗಳನ್ನು ರದ್ದುಗೊಳಿಸಿ, ರಾಜ್ಯಾದ್ಯಂತ ಏಕ ರೀತಿಯ ಕನಿಷ್ಠ ವೇತನವನ್ನು ಜಾರಿಗೊಳಿಸಬೇಕು.

3. ಗಾರ್ಮೆಂಟ್ಸ್ ಕಾರ್ಮಿಕರಿಗೆ ನ್ಯಾಯಯುತ ವೇತನವನ್ನು ಒದಗಿಸುವ ವಿಷಯವನ್ನು ಪರಿಶೀಲಿಸಲು, ಕಾರ್ಮಿಕ ಇಲಾಖೆಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ, ಕಾರ್ಮಿಕ ಸಂಘಟನೆ ಹಾಗೂ ಉದ್ಯಮ ಪ್ರತಿನಿಧಿಗಳನ್ನು ಒಳಗೊಂಡ, ಮತ್ತು ಉದ್ಯಮದ ನಿಪುಣ (Experts)ರನ್ನೊಳಗೊಂಡ ಒಂದು ಉಪಸಮಿತಿಯು ಈ ಕೂಡಲೇ ರಚನೆಯಾಗಬೇಕು. ಬೆಂಗಳೂರಿನಲ್ಲಿ ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್ (GATWU) ಗಾರ್ಮೆಂಟ್ಸ್ ಉದ್ಯಮದ ಒಂದು ಮುಖ್ಯ ಸಂಘಟನೆಯಾಗಿರುವುದರಿಂದ ಈ ಉಪಸಮಿತಿಯಲ್ಲಿ ಭಾಗವಹಿಸಲು ಅವಕಾಶ ನೀಡಬೇಕು. ಜೊತೆಗೆ ಗಾರ್ಮೆಂಟ್ಸ್ ಕಾರ್ಮಿಕರ ಪರಿಸ್ಥಿತಿ ಹಾಗೂ ಅವರ ವೇತನದ ಬಗ್ಗೆ ಒಂದು ವಿವರವಾದ ವರದಿ ಸಲ್ಲಿಸಲು ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್‌ಗೆ (GATWU) ಅವಕಾಶ ಮಾಡಿಕೊಡಬೇಕು. □

## ಇ.ಎಸ್.ಐ.ಗೆ ಸಂಬಂಧಪಟ್ಟಂತೆ ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರು ಅನುಭವಿಸುತ್ತಿರುವ ತೊಂದರೆಗಳು

**ಮುನ್ನಡೆ ಹಾಗೂ ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್ ಗಮನಿಸಿದಂತೆ**

1. ಕಾರ್ಮಿಕರಿಗೆ ಸರಿಯಾದ ರೀತಿಯಲ್ಲಿ ಕಾರ್ಡ್‌ಗಳನ್ನು ವಿತರಿಸದಿರುವುದು
2. ಡಿಸ್ಪೆನ್ಸರಿಯನ್ನು ಬದಲಿಸಿಕೊಳ್ಳಬೇಕಾದಾಗ ಕಾರ್ಮಿಕರು ಹಲವಾರು ಪ್ರಕ್ರಿಯೆಯನ್ನು ಮುಗಿಸಬೇಕಾಗಿರುವುದು
3. ಡಿಸ್ಪೆನ್ಸರಿಗಳ ಕೆಲಸದ ಸಮಯದ ತೊಂದರೆ
4. ಕಾರ್ಮಿಕರಿಗೆ ಇ.ಎಸ್.ಐ.ನಲ್ಲಿ ಇರುವ ಉತ್ತಮ ಸೌಲಭ್ಯಗಳ ಮಾಹಿತಿ ಇಲ್ಲದಿರುವುದು.
5. ರಾಜಾಜಿನಗರದ ಇ.ಎಸ್.ಐ.ನಲ್ಲಿ ಸ್ಕ್ಯಾನಿಂಗ್ ಮಾಡಿಸಲು ಇರುವ ತೊಂದರೆ.
6. ಗಾರ್ಮೆಂಟ್ಸ್ ಕಾರ್ಮಿಕರಿಗೆ ಇತ್ತೀಚೆಗೆ ಹೆಚ್ಚಾಗುತ್ತಿರುವ ಟಿ.ಬಿ.ಯ ಚಿಕಿತ್ಸೆ ಪಡೆಯಲು ಸಮಯದ ತೊಂದರೆ
7. ಇ.ಎಸ್.ಐ.ಗೆ ಮಾಲೀಕರು ವಂತಿಗೆ ಕಟ್ಟದಿರುವುದರಿಂದ ಕಾರ್ಮಿಕರು ಅನುಭವಿಸುತ್ತಿರುವ ತೊಂದರೆ.
8. ನಿರಂತರವಾಗಿ ಕೆಲಸ ಮಾಡುತ್ತಿರುವ ಕಾರ್ಮಿಕರು ಎರಡು ತಿಂಗಳಿಗಿಂತ ಹೆಚ್ಚುಕಾಲ ದಿಸ್ಪೆನ್ಸರಿಗೆ ಹೋಗದೆ ನಂತರ ಹೋದರೆ, ವೈದ್ಯರು ಫಾರಂ 37ಗಾಗಿ ಒತ್ತಾಯಿಸುವುದು.
9. ಇ.ಎಸ್.ಐ.ನಲ್ಲಿ ಭಾಷೆಯ ತೊಂದರೆ
10. ಒಳರೋಗಿಯಾಗಿ ದಾಖಲಾಗುವ ಕಾರ್ಮಿಕರ ಸಂಬಂಧಿಕರಿಗೆ, ರೋಗಿಗೆ ಏನಾಗಿದೆ ಅದಕ್ಕೆ ನೀಡುತ್ತಿರುವ ಚಿಕಿತ್ಸೆ ಏನು? ಹಾಗೂ ರೋಗಿ ಇಲ್ಲಿ ಎಷ್ಟು ದಿನ ಇರಬೇಕಾಗಬಹುದು ಎಂಬುದರ ಬಗ್ಗೆ ಕನಿಷ್ಟ ವಿವರಗಳನ್ನೂ ನೀಡದಿರುವುದು.

**ಆರೋಗ್ಯ ಭಾಗ್ಯ**

**ವಸ್ತು: ಮೆಂತೆಸೊಪ್ಪು**
ಶಮನ: ಉಳುಕು
ಕೈಕಾಲು ಉಳುಕಿ ಉಂಟಾದ ಊತಕ್ಕೆ ಮತ್ತು ಬಾವಿನಿಂದ ಊತ ಬಂದಿರುವ ಜಾಗಕ್ಕೆ ಮೆಂತೆಸೊಪ್ಪಿನ ರಸ ಮತ್ತು ನಿಂಬೆರಸ ಇವೆರಡನ್ನೂ ಸೇರಿಸಿ ಊತವಿರುವ ಜಾಗಕ್ಕೆ ಹಚ್ಚುವುದರಿಂದ ಊತ ಹಾಗೂ ನೋವು ಕಡಿಮೆಯಾಗುವುದು.

**ವಸ್ತು: ಕೊತ್ತಂಬರಿ**
ಶಮನ: ರಕ್ತದ ಒತ್ತಡ
ಕೊತ್ತಂಬರಿ ಬೀಜದ ಪುಡಿ ಮತ್ತು ಗುಲ್ಕನ್(ಗುಲಾಬಿ ಮತ್ತು ಜೇನುತುಪ್ಪದ ಮಿಶ್ರಣ) ಇವುಗಳನ್ನು ಸೇರಿಸಿ ಸೇವಿಸುವುದರಿಂದ ಅಧಿಕ ರಕ್ತದೊತ್ತಡ ನಿವಾರಣೆಯಾಗುವುದು.

**ವಸ್ತು: ಕರಿಬೇವು**
ಶಮನ: ಅಜೀರ್ಣ
ಕರಿಬೇವಿನ ಸೊಪ್ಪು 5 ಗ್ರಾಂ, ಮತ್ತು 5 ಗ್ರಾಂ ಶುಂಠಿ ಇವುಗಳನ್ನು ಸೇರಿಸಿ ಅರೆದು 2 ಭಾಗ ಮಾಡಿ ಬೆಳಿಗ್ಗೆ ಹಾಗೂ ರಾತ್ರಿ ಸೇವಿಸುವುದರಿಂದ ಅಜೀರ್ಣ ಕಡಿಮೆಯಾಗುವುದು.



Scanned with OKEN Scanner

## ಮುನ್ನಡೆ ಚುನಾವಣೆ

ಮುನ್ನಡೆ 4 ವರ್ಷ ಪೂರೈಸಿದ ಹಿನ್ನೆಲೆಯಲ್ಲಿ, ಕಾರ್ಯಕಾರೀ ಸಮಿತಿ ಸದಸ್ಯರ ಎರಡನೇ ಚುನಾವಣೆ ನಡೆಯಬೇಕಿದೆ. ಇದೇ 2008ರ ನವೆಂಬರ್ 1 ಹಾಗೂ 2 ರಂದು, ನಡೆಯುವ ಸರ್ವ ಸದಸ್ಯರ ಸಭೆಯಲ್ಲಿ, ಕಾರ್ಯಕಾರೀ ಸಮಿತಿಯ ಸದಸ್ಯರ ಚುನಾವಣೆ ಘೋಷಣೆಯಾಗಿದೆ. ತಾವು ಗಾರ್ಮೆಂಟ್ಸ್ ಕಾರ್ಮಿಕರಾಗಿದ್ದು, ಮುನ್ನಡೆಯ ಸದಸ್ಯರಾಗಿದ್ದಲ್ಲಿ ಚುನಾವಣೆಗೆ ನಾಮಪತ್ರವನ್ನು ಸಲ್ಲಿಸಬಹುದು.

**ನಾಮಪತ್ರ ಸಲ್ಲಿಸಲು ಕೊನೆಯದಿನಾಂಕ ಅಕ್ಟೋಬರ್ 15 2008. ತಮಗೆ ನಾಮಪತ್ರ ಸಲ್ಲಿಸುವ ಆಸಕ್ತಿ ಇದ್ದಲ್ಲಿ, ಈ ಕೆಳಗೆ ನೀಡಿರುವ ಸಂಖ್ಯೆಗಳಲ್ಲಿ ಸಂಪರ್ಕಿಸಬಹುದು.**

ಇದೇ ನವೆಂಬರ್ 1 ಕ್ಕೆ ಮುನ್ನಡೆಗೆ ನಾಲ್ಕು ವರ್ಷ ತುಂಬಿ ಐದನೇ ವರ್ಷಕ್ಕೆ ಕಾಲಿಡುತ್ತಿದೆ. ಕಳೆದ 4 ವರ್ಷಗಳಿಂದ ಮುನ್ನಡೆ ಯಶಸ್ವಿಯಾಗಿ ತನ್ನ ಗುರಿಯನ್ನು ಸಾಧಿಸುವತ್ತ ಮುನ್ನಡೆಯುತ್ತಿದೆ. ಈ ಯಶಸ್ಸಿಗೆ ತಮ್ಮೆಲ್ಲರ ಪ್ರೋತ್ಸಾಹವೇ ಕಾರಣ.

ಹಲವು ಸಾಮಾಜಿಕ ಕಾರ್ಯಕ್ರಮಗಳು, ಪ್ರತಿಭಟನೆಗಳು, ಅದಲ್ಲದೆ ಕಾರ್ಮಿಕರಿಗೆ ಉಪಯುಕ್ತವಾಗುವ ಹಲವಾರು ಕಾರ್ಯಕ್ರಮುಗಳನ್ನು ಮುನ್ನಡೆ ಇದುವರೆಗೂ ಹಮ್ಮಿಕೊಂಡಿದ್ದು, ಮಾಧ್ಯಮಗಳು ಹಾಗೂ ಇತರ ಸಂಗಹ್ಪನೆಳಲ್ಲಿಯೂ ತನ್ನ ಇರುವನ್ನು ಗುರುತಿಸಿಕೊಂದಿದೆ.

ಮೊದಲನೇ ಚುನಾವಣೆಯಲ್ಲಿ ಆಯ್ಕೆಯಾದ ಮುನ್ನಡೆಯ ಕಾರ್ಯಕಾರೀ ಸಮಿತಿಯು ಉತ್ಸಾಹದಂದ ಕೆಲಸ ಮಾಡುತ್ತಾ ಮುನ್ನಡೆಯನ್ನು ಒಂದು ನಿರ್ದಿಷ್ಟ ದಿಕ್ಕಿಗೆ ನಡೆಯಲು ಅಪಾರ ಕೆಲಸ ಮಾಡಿದ್ದಾರೆ. ಆರೋಗ್ಯ ಶಿಬಿರಗಳನ್ನು ಏರ್ಪಡಿಸುವುದು, ಲೋಕಲ್ ಕಮಿಟಿಗಳ ರಚನೆಯ ಮೂಲಕ ಸ್ಥಳೀಯ ಸಮಸ್ಯೆಗಳನ್ನು ಗುರುತಿಸುತ್ತಿರುವುದು, ಬೇರೆ-ಬೇರೆ ಸಂಘ ಸಂಸ್ಥೆಗಳೊಡನೆ ಪರಿಣಾಮಕಾರಿಯಾಗಿ ಕೆಲಸ ಮಾಡುತ್ತಿರುವುದು, ಒಟ್ಟಿನಲ್ಲಿ ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಯಾವುದೇ ಸಮಸ್ಯೆ ಇದ್ದರೂ ಅದಕ್ಕೆ ಸ್ಪಂದಿಸುತ್ತಿರುವುದು ಮುನ್ನಡೆಯ ವಿಶೇಷವಾಗಿದೆ.

ಈ ಕೆಲಸ ಕಾರ್ಯಗಳನ್ನು ಇನ್ನೂ ಪರಿಣಾಮಕಾರಿಯಾಗಿ ಮುಂದುವರೆಸಲು ತಮ್ಮ ಬೆಂಬಲ ಸಲಹೆ ಅತ್ಯಗತ್ಯ.

**ಮೊಬೈಲ್ : 9449506451 / 9844959210**

## ನೀವು ಗುತ್ತಿಗೆ ಕಾರ್ಮಿಕರೇ ?

ಇತ್ತೀಚಿನ ದಿನಗಳಲ್ಲಿ ಗಾರ್ಮೆಂಟ್ಸ್ ಕಾರ್ಖಾನೆಗಳಲ್ಲಿ ಗುತ್ತಿಗೆ ಕಾರ್ಮಿಕರ ನೇಮಕಾತಿ ಹೆಚ್ಚಾಗುತ್ತಿದೆ. ಈ ಗುತ್ತಿಗೆಯಾಧಾರದಲ್ಲಿ ಕಾರ್ಮಿಕರನ್ನು ನೇಮಿಸಿಕೊಳ್ಳುವ 'ಕಂಟ್ರಾಕ್ಟರ್'ಗಳು ಕೆಲವು ಕಾನೂನುಗಳನ್ನು ಪಾಲಿಸಲೇ ಬೇಕು ಇವುಗಳನ್ನು ಕಾರ್ಮಿಕರು ಸಹ ತಿಳಿದುಕೊಳ್ಳಲೇಬೇಕು.

**ಕರ್ನಾಟಕ ಸರ್ಕಾರ ಗುತ್ತಿಗೆ ಕಾರ್ಮಿಕರ (ನಿಯಂತ್ರಣ ಮತ್ತು ನಿರ್ಮೂಲನಾ) ಕಾಯಿದೆ ಕರ್ನಾಟಕ 1974ರ ಅಡಿಯಲ್ಲಿ ಗುತ್ತಿಗೆದಾರ(ಕಂಟ್ರಾಕ್ಟರ್)ನು ಅನುಸರಿಸಬೇಕಾದ ನಿಯಮಗಳು:**

| | | | |
|---|---|---|---|
| 1. | ಕಾಂಟ್ರಾಕ್ಟ್ ಮೇಲೆ ಕಾರ್ಮಿಕರನ್ನು ನೇಮಿಸಿಕೊಳ್ಳಬೇಕಾದಾಗ ಸಲ್ಲಿಸುವ ಅಪ್ಲಿಕೇಶನ್ | – | ಫಾರಂ ನಂ 1 (ರೂಲ್ ನಂ 17) |
| 2. | ಕಂಟ್ರಾಕ್ಟರ್ ಲೈಸೆನ್ಸ್ ಪಡೆದುಕೊಳ್ಳಬೇಕಾದಾಗ ಸಲ್ಲಿಸಬೇಕಾದ ಅರ್ಜಿ | – | ಫಾರಂ ನಂ 4 (ರೂಲ್ 21(1)) |
| 3. | ಲೈಸೆನ್ಸ್ ನವೀಕರಿಸಿಕೊಳ್ಳಲು ಬೇಕಾದ ಅರ್ಜಿ | – | ಫಾರಂ ನಂ 7 (ರೂಲ್ 22(2)) |
| 4. | ಮೂಲ ಮಾಲೀಕರು ಕೊಡಬೇಕಾದ (ಫಾಕ್ಟರಿ ಮಾಲೀಕರು) ಸರ್ಟಿಫಿಕೇಟ್ | – | ಫಾರಂ ನಂ 5 (ರೂಲ್ 22(2)) |
| 5 | ಲೈಸೆನ್ಸ್ ಕೊಡುವ ಅಧಿಕಾರಿಗಳಿಗೆ ಕೊಡಬೇಕಾದ ಅರ್ಧ ವಾರ್ಷಿಕ ವರದಿ | – | ಫಾರಂ 24 (ರೂಲ್ 22(1)) |
| 6. | ರಿಜಿಸ್ಟರ್ ಮಾಡುವ ಅಧಿಕಾರಿಗಳಿಗೆ ಮೂಲ ಮಾಲೀಕರು ನೀಡಬೇಕಾದ ವಾರ್ಷಿಕ ವರದಿ | – | ಫಾರಂ 25 (ರೂಲ್ 82(2)) |

**ಕಂಟ್ರಾಕ್ಟರ್ ಪಾಲಿಸಬೇಕಾದ ರಿಜಿಸ್ಟರ್‌ಗಳು**

1. ತನ್ನ ಬಳಿ ರೆಜಿಸ್ಟರ್ ಮಾಡಿಸಿರುವ ವ್ಯಕ್ತಿಯ ಮಾಹಿತಿಯ ರಿಜಿಸ್ಟರ್
2. ಪ್ರತಿ ಕಾರ್ಮಿಕರಿಗೂ ನೇಮಕಾಗಿ ಪತ್ರ(ಫಾರಂ ನಂ 14ರಲ್ಲಿ)
3. ಉದ್ಯೋಗದಿಂದ ತೆಗೆದುಹಾಕಿದಲ್ಲಿ ಸೇವೆಯ ಪ್ರಮಾಣಪತ್ರ (ಫಾರಂ ನಂ 15 ರಲ್ಲಿ)
4. ಪ್ರತಿ ಕಾರ್ಮಿಕರಿಗೂ ವೇತನ ಚೀಟಿ (ಫಾರಂ ನಂ 19)
5. ವೇತನದ ರೆಜಿಸ್ಟರ್ (ಫಾರಂ ನಂ. 17 ರಲ್ಲಿ)

**ಮೂಲಮಾಲೀಕರು (ಫ್ಯಾಕ್ಟರಿ ಮಾಲೀಕರು) ಪಾಲಿಸಬೇಕಾದ ರಿಜಿಸ್ಟರ್ ಗಳು**

1. ಕಂಟ್ರಾಕ್ಟರ್‌ಗಳ ರೆಜಿಸ್ಟರ್
2. ವಾರ್ಷಿಕ ವರದಿ



Scanned with OKEN Scanner

# "ಸಂಘಟನೆ ಎಂಬುದು ನಾಟಕವಲ್ಲ, ಶೋ ಅಲ್ಲ, ಯಾರಿಗೋ ತೋರಿಸಬೇಕೆಂದು ಉದ್ದೇಶ ಇರಬಾರದು"

✍ ಡಾ. ಬಂಜಗೆರೆ ಜಯಪ್ರಕಾಶ್

ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್ ವತಿಯಿಂದ, ಸುಮಾರು 30 ಮಂದಿ ನಾಯಕತ್ವದ ಗುಣವುಳ್ಳ ಗಾರ್ಮೆಂಟ್ಸ್ ಕಾರ್ಮಿಕರಿಗೆ ನಾಯಕತ್ವ ಬೆಳವಣಿಗೆ ಹಾಗೂ ಕೌಶಲ್ಯ ಹೆಚ್ಚಿಸುವಿಕೆಯ ಬಗ್ಗೆ ತರಬೇತಿ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಬಂಜಗೆರೆ ಜಯಪ್ರಕಾಶ್ ಹಾಗೂ ಗುತ್ತಿಗೆ ಪೌರಕಾರ್ಮಿಕರ ಸಂಘದಿಂದ ಜಯಮ್ಮ ಭಾಗವಹಿಸಿದ್ದರು.

ಈ ತರಬೇತಿ ಕಾರ್ಯಕ್ರಮದಲ್ಲಿ ಮುಖ್ಯವಾಗಿ ಸಂಘಟನೆಯ ಅಗತ್ಯ, ಸವಾಲು ಹಾಗೂ ನಾಯಕತ್ವದ ಲಕ್ಷಣಗಳನ್ನು ಕುರಿತು ಬಂಜಗೆರೆ ಜಯಪ್ರಕಾಶ್‌ರವರು ಪರಿಣಾಮಕಾರಿಯಾಗಿ ಮಾತನಾಡಿದರು ಅದರ ಕೆಲವು ಅಂಶಗಳು ಇಲ್ಲಿವೆ.

**ಮಹಿಳೆ**

- ಇಂದು ನಗರದಲ್ಲಿ ಕೆಲಸ ಮಾಡುತ್ತಿರುವ ಪ್ರತಿಯೊಬ್ಬ ಮಹಿಳೆಯರೂ ಸಹ ಎರಡು ರೀತಿಯ ಮನಸ್ಥಿತಿಯನ್ನು ಹೊಂದಿದ್ದಾರೆ. ಒಂದು: ಅರೆ ಊಳಿಗ ಮಾನ್ಯ ಪದ್ಧತಿಯ ಮನಸ್ಥಿತಿ. ಮತ್ತೊಂದು ಮಹಿಳಾ ಧೋರಣೆ. ಈ ಎರಡು ಕಾರಣಗಳಿಂದ ತಮಗೆ ಕೆಲಸ ಕೊಡುವ ಧಣಿಗಳ ಬಗ್ಗೆ ಒಂದು ವಿಚಿತ್ರ ಋಣಪ್ರಜ್ಞೆ ಬೆಳೆಸಿಕೊಂಡಿರುತ್ತಾರೆ ಹಾಗೂ ತಾನು ಹೆಣ್ಣಾದ್ದರಿಂದ ತಗ್ಗಿಬಗ್ಗಿ ನಡೆಯಬೇಕು ಎಂಬಭಾವನೆ ಬೆಳೆಸಿಕೊಂಡಿದ್ದಾರೆ. ಯಾರಿಗೂ ತಾವು ಕಾರ್ಮಿಕರು ಎಂಬ ಕಲ್ಪನೆಯೇ ಇಲ್ಲ.
- ಪ್ರಪಂಚದಲ್ಲಿ ಹೆಚ್ಚು ಪಳಗಿಸಲ್ಪಟ್ಟಿರುವ ಪ್ರಾಣಿ ಎಂದರೆ ಹೆಣ್ಣು. ಹೇಳಿದ ಹಾಗೆ ಕೇಳುವಂತೆ ಸುಮ್ಮನೆ ಎಲ್ಲವನ್ನೂ ಸಹಿಸಿಕೊಳ್ಳುವುದರಿಂದ ಬೇಕಾದ ಹಾಗೆ ಬಳಸಿಕೊಳ್ಳಲಾಗುತ್ತಿದೆ, ಇದು ಕುಟುಂಬದ ಮಟ್ಟದಲ್ಲಿ ಅಲ್ಲದೆ ದುಡಿಯುವ ಸ್ಥಳದಲ್ಲಿಯೂ ಅನ್ವಯಿಸಲಾಗುತ್ತಿದೆ.
- ಯಾವುದೇ ಹೆಣ್ಣುಮಕ್ಕಳು ತಾವು ಸಂಸಾರದಲ್ಲಿ ಪೂರ್ಣ ಸುಖಿಗಳು ಎಂದು ತಿಳಿದುಕೊಂಡಿದ್ದಾರೋ ಅವರು ತಮ್ಮ ಸಹಜ ಹಕ್ಕನ್ನು ಒಮ್ಮೆಯೂ ಚಲಾಯಿಸಿರುವುದಿಲ್ಲ. ಒಮ್ಮೆ ಪ್ರಶ್ನಿಸಿದರೆ ಆಗ ನಿಜ ತಿಳಿಯುತ್ತದೆ. ಕಾರ್ಖಾನೆಯಲ್ಲಿಯೂ ಅಷ್ಟೇ ನಮ್ಮ ಫ್ಯಾಕ್ಟರಿ ತುಂಬಾ ಚೆನ್ನಾಗಿದೆ ಎನ್ನುವ ಕಾರ್ಮಿಕರು ತಮ್ಮ ಸಹಜ ಹಕ್ಕನ್ನು ಒಮ್ಮೆಯೂ ಕೇಳಿರುವುದಿಲ್ಲ.
- ಮಹಿಳೆಯರಿಗೆ ಇಂದು ದುಡ್ಡು ಬಂದರೆ ಸಾಲದು. ಸಾಮಾಜಿಕ ಸ್ಥಾನಮಾನ, ಅಂತಸ್ತಿನಲ್ಲಿ ಬದಲಾವಣೆ ಆಗದಿದ್ದರೆ ದುಡ್ಡಿನಿಂದ ಏನೂ ಪ್ರಯೋಜನವಿಲ್ಲ. ಬಡತನ, ದಲಿತತನ ವಿದ್ದಂತೆ ಮಹಿಳಾತನ ಕೂಡಾ.

**ಸಂಘಟನೆ**

- ಯಾವುದೇ ಸಂಘಟನೆಗೆ ಒಂದು ಸಾಂಸ್ಥಿಕ ರೂಪ ಬರಬೇಕು. ಪದಾಧಿಕಾರಿಗಳು, ಆಫೀಸ್ ಇದ್ದಮಾತ್ರಕ್ಕೆ ಅದು ಸಂಸ್ಥೆ ಎನಿಸಿಕೊಳ್ಳುವುದಿಲ್ಲ, ಅದು ಬರಿಯ ಅರೇಂಜ್‌ಮೆಂಟ್ಸ್ ಅಷ್ಟೇ, ಗುರಿ ಸಾಧಿಸುವ ಮನಸ್ಸಿರುವ ಕಾರ್ಯಕರ್ತರು ಮೊದಲು ಇದ್ದರೆ ಅರೇಂಜ್‌ಮೆಂಟ್ಸ್ ತಂತಾನೆ ಆಗುತ್ತದೆ. (ನಿಸ್ವಾರ್ಥ ಮನಸ್ಸಿನ, ಉತ್ಸಾಹೀ ಕಾರ್ಯಕರ್ತರ ಅಗತ್ಯ)
- ಯೂನಿಯನ್ ಮಾಡಬೇಕಾದ ಕೆಲಸವೆಂದರೆ ಮಹಿಳಾ ಕಾರ್ಮಿಕರ ಧೋರಣೆಗಳಲ್ಲಿ ಬದಲಾವಣೆ ತರುವುದು, ಆತ್ಮವಿಶ್ವಾಸ ಬೆಳೆಸುವುದು, ಮಹಿಳೆ ಅವಳ ಪ್ರವೃತ್ತಿಯಲ್ಲಿನ ದೋಷದಿಂದಾಗಿ ಎಷ್ಟೋ ಬಾರಿ ತನ್ನ ಮೇಲೆ ಆಗುತ್ತಿರುವುದು ಶೋಷಣೆ ಎಂದೇ ಗುರುತಿಸುತ್ತಿಲ್ಲ.
- ಕಾರ್ಮಿಕ ಧೋರಣೆಯ ಕೊರತೆಯಿಂದಾಗಿ ಯೂನಿಯನ್ ಅಥವಾ ಸಂಘಟನೆ ಕಿಡಿಗೇಡಿಗಳು ಮಾಡುವ ಕೆಲಸ ಎಂಬ ಭಾವನೆ ಕಾರ್ಮಿಕರಲ್ಲಿ ದೊಡ್ಡದಾಗಿ ಬೆಳೆದಿದೆ. ಅರೆ ಊಳಿಗಮಾನ್ಯ ಪದ್ಧತಿಯ ಮನಸ್ಥಿತಿ, ಹಾಗೂ ಅರೆಕಾಲಿಕ ಕಾರ್ಮಿಕರ ಮನಸ್ಥಿತಿಯಿಂದಾಗಿ ಅನ್ನವಿಟ್ಟವನಿಗೆ ದ್ರೋಹ ಮಾಡಬಾರದು ಎಂಬ ಮೌಲ್ಯ ತುಂಬಿಕೊಂಡಿದೆ.
- ಸಂಘಟನೆ ಎಂದರೆ ಅದು ಒಂದು ಸಾಂತ್ವನದ ತಾಣ, ರಕ್ಷಣೆಯ ವ್ಯವಸ್ಥೆ. ಒಟ್ಟಾಗಿದ್ದಾಗ ಯಾವುದೇ ಸಮಸ್ಯೆ ದೊಡ್ಡದು ಎನಿಸುವುದಿಲ್ಲ. ಏಕಾಂಗಿತನ ಮನುಷ್ಯ ಪ್ರವೃತ್ತಿಗೆ ವಿರುದ್ಧವಾದದ್ದು.
- ಇಂದು ನಾವು ಒಟ್ಟಾಗಿದ್ದರೂ ನಮ್ಮಲ್ಲಿ ಹೋರಾಡುವ ಸಿದ್ಧತೆ ಇಲ್ಲ, ಒಂದು ತಯಾರಿ ಇಲ್ಲ, ದಾರಿ ಗೊತ್ತಿಲ್ಲ. ನಾವು ಕೇಳಬೇಕಾದ ಅಂಶಗಳನ್ನು ಘನತೆಯಿಂದ ಕೇಳುವುದೂ ಸಹ ಸಂಘಟನೆಗೆ ಶೋಭೆ ತರುತ್ತದೆ.
- ಸಂಘಟನೆ ಮಾಡಲು ಗುರಿ ಮುಖ್ಯವೇ ಹೊರತು ಚಟುವಟಿಕೆಗಳಲ್ಲ, ತೀರಾ ವೈಯಕ್ತಿಕ ವಿಷಯಗಳಿಗೂ ಸಹ ಒಟ್ಟಾಗಿ ಕೆಲಸ ಮಾಡಬಹುದು (ತಿಂಗಳಿಗೊಮ್ಮೆ ಎಲ್ಲರೂ ಸೇರಿ ರಂಗೋಲಿ ಹಾಕುವ ಚಟುವಟಿಕೆ ಮಾಡಿದರೂ, ಅಂತಿಮ ಗುರಿ ಸ್ಪಷ್ಟವಾಗಿದ್ದರೆ ಸಾಕು)
- ನಮ್ಮನಮ್ಮಲ್ಲಿನ ಚಿಕ್ಕ ಪುಟ್ಟ ಸಮಸ್ಯೆಗಳನ್ನು ಬಗೆಹರಿಸುತ್ತಲೇ ಯಾವುದೇ ಸಂಘಟನೆ ಅಥವಾ ಹೋರಾಟ ದೊಡ್ಡ ಮಟ್ಟದ ಸಮಸ್ಯೆಗಳನ್ನು ಪರಿಹರಿಸಲು ಶಕ್ತವಾಗುತ್ತದೆ.
- ನಮ್ಮ ಸಂಘಟನೆಯ ಹೆಸರಿನಿಂದ ನಮ್ಮ ಕೆಲಸ ನಿರ್ಧಾರವಾಗುವುದಿಲ್ಲ, ಹೆಸರು ನಿಮಿತ್ತ ಮಾತ್ರ, ನಮ್ಮ ಗುರಿ ಮುಖ್ಯ, ಸಮೂಹದಿಂದ ಬರುವ ಧೈರ್ಯ ಪ್ರೋತ್ಸಾಹ ಹೆಚ್ಚು ಪರಿಣಾಮಕಾರಿ. ಹಳ್ಳಿಗಳ ಜಾತ್ರೆಗಳು ಅಪಾರ ಯಶ ಕಾಣುವುದಕ್ಕೆ ಅದೇ ಕಾರಣ.



**ನಾಯಕತ್ವ**

- ಸಂಘಟನೆಯ ಯಾವುದೇ ಕೆಲಸ ಮಾಡುವಾಗ ಯೋಚಿಸಿ, ವಿವೇಚಿಸಿ ಕೆಲಸ ಮಾಡಿದರೆ ನಿರೀಕ್ಷಿಸಿದುದಕ್ಕಿಂತ ಹೆಚ್ಚಿನ ಪರಿಣಾಮ ಬೀರುತ್ತದೆ. ಕೆಲವೊಮ್ಮೆ ವಿವೇಚಿಸಿ ಒಂದು ಹೆಜ್ಜೆ ಹಿಂದೆ ಇಟ್ಟರೂ ಸಹ, ಎರಡು ಹೆಜ್ಜೆ ಮುಂದೆ ಹೋದಷ್ಟು ಪರಿಣಾಮ ಬೀರಿರುತ್ತದೆ.
- ವೈಯಕ್ತಿಕ ಹೀರೋಯಿಸಂ ಸಂಘಟನೆಯನ್ನು ಹಾಳುಮಾಡುತ್ತದೆ. ಇದರಲ್ಲಿ ಎರಡು ರೀತಿಯ ತೊಂದರೆಗಳಿವೆ. ಒಂದು ಅವರ ವೈಯಕ್ತಿಕ ಹಿತಾಸಕ್ತಿಯಿಂದ ಸಂಘಟನೆಗೆ ತೊಂದರೆಯಾಗಬಹುದು. ಇಲ್ಲವೇ ಅವರೊಬ್ಬರೇ ಗುರುತಿಸಲ್ಪಟ್ಟು ಬಲಿಪಶುಗಳಾಗಬಹುದು.
- ಸಾಮೂಹಿಕ ನಾಯಕತ್ವ ಬಹಳ ಪರಿಣಾಮಕಾರಿ. ನಮ್ಮ ವಿರೋಧಿಗಳನ್ನು ಭೇಟಿ ಮಾಡಲು ಒಬ್ಬರೇ ಎಂದೂ ಹೋಗಬಾರದು. ಏಕೆಂದರೆ ಅಲ್ಲಿ ಸೋಲು ಅಥವಾ ಗೆಲುವು ಏನೇ ಆದರೂ ಎಲ್ಲರೂ ಹಂಚಿಕೊಳ್ಳಬಹುದು.
- ಬಂಡವಾಳಗಾರ ಹಾಗೂ ಕಾರ್ಮಿಕ ಈ ಪ್ರಪಂಚದಲ್ಲಿರುವ ಎರಡು ವೈರುದ್ಧ್ಯಗಳು. ಇದು ಎಂದಿಗೂ ಒಂದಾಗಲು ಸಾಧ್ಯವಿಲ್ಲ. ಆದರೂ ಎರಡು ಇಲ್ಲದಿದ್ದರೂ ನಡೆಯುವುದಿಲ್ಲ. ಈ ಅಂಶವನ್ನು ಅರ್ಥಮಾಡಿಕೊಂಡು ಒಂದು ಸಮತೋಲನ ಕಾಪಾಡಬೇಕು. ನಮ್ಮ ಪ್ರತಿಹೆಜ್ಜೆ ನೂರಾರು ಕಾರ್ಮಿಕರ ಪ್ರತಿನಿಧಿ ಎಂಬ ವಿವೇಕದಿಂದ ನಡೆಯಬೇಕು.
- ಸಂಘಟನೆ ಎಂಬುದು ನಾಟಕವಲ್ಲ, ಶೋ ಅಲ್ಲ, ಯಾರಿಗೋ ತೋರಿಸಬೇಕೆಂಬ ಇರಾದೆ ಅಲ್ಲ.
- ಗಲಿಬಿಲಿ ವರ್ತನೆ, ದುಡುಕಿನ ಮನೋಭಾವನೆ ನಾಯಕತ್ವದ ವಿರೋಧಿ. ವಿವೇಕದಿಂದ ನಮ್ಮ ಸರದಿ ಬರುವವರೆಗೂ ಕಾಯಬೇಕು.

❑

## ಕಾಮನಬಿಲ್ಲು

# ಶುಭಾಶಯಗಳು



ಹರ್ಷಿತ
ಹುಟ್ಟಿದ ದಿನಾಂಕ:
9-11-1998
ತಂದೆ : ದೇವರಾಜು
ತಾಯಿ : ಯಶೋಧಾ
ಕಾರ್ಖಾನೆ : ಬ್ಯಾಚಾ



ಭಾಸ್ಕರ್ ಎಂ.ಆರ್.
ಹುಟ್ಟಿದ ದಿನಾಂಕ:
30-10-1996
ತಾಯಿ : ವಸಂತ
ಕಾರ್ಖಾನೆ :
ವಂಡರ್ ಬ್ಲೂ



ಅನುಷಾ
ಹುಟ್ಟಿದ ದಿನಾಂಕ:
30-10-1996
ತಾಯಿ : ಪಾರ್ವತಮ್ಮ
ಕಾರ್ಖಾನೆ :
ವಂಡರ್ ಬ್ಲೂ



## ಗಾಳಿಪಟ

*ಮುಗಿಲೆತ್ತರಕ್ಕೆ ಹಾರಲಿ*
*ಹಾರಲಿ ಗಾಳಿಪಟ*
*ಎಲ್ಲ ಎಲ್ಲೆಗಳ ಮೀರಿ*
*ಜನಶಕ್ತಿಯ ಎಲ್ಲೆಡೆ ಸಾರಿ*
*ನಿಲ್ಲಲಿ ಗೆಲ್ಲಲಿ*
*ನಮ್ಮೀ ಹೋರಾಟ*

*– ದೀಪಾ ಗಿರೀಶ್*

ಕಾರ್ಮಿಕ ಮಿತ್ರರೇ,

**ಸೂಜಿದಾರ ನಿಮ್ಮದೇ. ಇಲ್ಲಿ ಬರೆಯುವ ವಿಷಯ ನಿಮ್ಮವೇ. ಇದನ್ನು ಇನ್ನೂ ಚಂದಗೊಳಿಸಲು ತಮ್ಮಿಂದ ಸಲಹೆ, ಸೂಚನೆ ಸುದ್ದಿಗಳನ್ನು ನಮಗೆ ತಲುಪಿಸಿ. ತಮ್ಮಿಂದ ಪ್ರತಿಕ್ರಿಯೆಗಳನ್ನು ನಾವು ಸದಾ ನಿರೀಕ್ಷಿಸುತ್ತಿದ್ದೇವೆ.**

**ದಯವಿಟ್ಟು ಈ ಕೆಳಗಿನ ವಿಳಾಸಕ್ಕೆ ತಮ್ಮ ಅನಿಸಿಕೆಗಳನ್ನು ಕಳುಹಿಸಬೇಕಾಗಿ ವಿನಂತಿ.**

*ಸಂಪಾದಕ ಮಂಡಳಿ*

## ನೆರವು

ಪ್ರತಿ ಶನಿವಾರ ಹಾಗೂ ಭಾನುವಾರಗಳಂದು, ಗಾರ್ಮೆಂಟ್ಸ್ ಕಾರ್ಮಿಕರು ಯಾವುದೇ ಕಾರ್ಮಿಕ ವಿವಾದಕ್ಕಾಗಿ, ತಮ್ಮ ಮೇಲಿನ ದೌರ್ಜನ್ಯ, ಕೌಟುಂಬಿಕ ಸಲಹೆಗಾಗಿ ತಜ್ಞ ವಕೀಲರನ್ನು ಈ ಕೆಳಕಂಡ ಸಂಸ್ಥೆಯಲ್ಲಿ ಉಚಿತವಾಗಿ ಸಂಪರ್ಕಿಸಬಹುದು

**ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ**, ನಂ.8/3, ಶ್ರೀಮಾತಾ ನಿಲಯ ನ್ಯೂಟಿಂಬರ್‌ಯಾರ್ಡ್ ಲೇಔಟ್, ಮೈಸೂರು ರಸ್ತೆ, ಬೆಂಗಳೂರು-29. ದೂ.: 26751320, ಶನಿವಾರ ಸಂಜೆ 5-30ರ ನಂತರ ಹಾಗೂ ಭಾನುವಾರ ಬೆಳಿಗ್ಗೆ 10-30ರ ನಂತರ

## ಮಹಿಳಾ ಕಾರ್ಮಿಕರಿಗೆ ಸಹಾಯ ಮಾಡುವ ಇನ್ನಿತರೆ ಸಂಸ್ಥೆಗಳು

1. **ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್ (GATWU)**
   ನಂ. 27, 5ನೇ ಮುಖ್ಯರಸ್ತೆ
   6ನೇ ಅಡ್ಡರಸ್ತೆ
   ಸಂಪಂಗಿರಾಮನಗರ
   ಬೆಂಗಳೂರು – 560 027.

   *ಪೀಣ್ಯ ಶಾಖೆ*
   ನಂ. 91, 2ನೇ ಮುಖ್ಯರಸ್ತೆ
   5ನೇ ಅಡ್ಡರಸ್ತೆ, 3ನೇ ಫೇಸ್
   ಗಣಪತಿ ನಗರ, ಪೀಣ್ಯ
   ಬೆಂಗಳೂರು – 560 056
   ಮೊ: 9880371922

2. **ಕರ್ನಾಟಕ ಮಹಿಳಾ ಆಯೋಗ**
   ನಂ. 105, ಮೊದಲನೇ ಮಹಡಿ
   ಕರ್ನಾಟಕ ಗೃಹ ಮಂಡಳಿ ಕಟ್ಟಡ
   ಕಾವೇರಿಭವನ, ಕೆ.ಜಿ.ರಸ್ತೆ,
   ಬೆಂಗಳೂರು-560009
   ದೂ.: 22216485

3. **ವನಿತಾ ಸಹಾಯವಾಣಿ**
   ಪೊಲೀಸ್ ಕಮಿಷನರ್
   ಕಛೇರಿ ಆವರಣ
   ಇನ್‌ಫೆಂಟರಿ ರಸ್ತೆ, ಬೆಂಗಳೂರು
   ಉಚಿತ ದೂರವಾಣಿ: 1091
   ದೂ.: 22943225

4. **ವಿಮೋಚನಾ**
   ನಂ. 33/1-9
   ತ್ಯಾಗರಾಜ ಬಡಾವಣೆ
   ಜೈಭಾರತನಗರ
   ಮಾರುತಿ ಸೇವಾನಗರ
   ಬೆಂಗಳೂರು-38
   ದೂ.: 25492781 / 25492782

5. **ಕರ್ನಾಟಕ ಕಾನೂನು ಸೇವೆಗಳ ಪ್ರಾಧಿಕಾರ**
   ನ್ಯಾಯ ದೇಗುಲ
   ಎಚ್. ಸಿದ್ಧಯ್ಯ ರಸ್ತೆ
   ಬೆಂಗಳೂರು-27

ಸಂಪಾದಕ ಮಂಡಳಿ : ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ, ನಂ. 8/3, ಶ್ರೀಮಾತಾ ನಿಲಯ, ಎನ್.ಟಿ.ವೈ. ಲೇಔಟ್, ಮೈಸೂರು ರಸ್ತೆ, ಬೆಂ-560026. ದೂ. : 2675 1320
ಪ್ರಕಾಶಕರು : ಸಿವಿಡೆಫ್-ಇಂಡಿಯಾ. ಮುದ್ರಣ : ಇಳಾ ಮುದ್ರಣ, ಬೆಂಗಳೂರು – 560 026. ದೂ. : 26757159

Scanned with OKEN Scanner